ಮಾತ್ರ ಆ ಸೆಂಟಿಮೆಂಟಲ್ ಹಾಡುಗಳು ಅವನಲ್ಲಿ ಜೀವ ಸೆಲೆ ಉಕ್ಕಿಸಲಾರವು.

ಒಂದಿನ ಮಾರ್ಕ್ವೆಜ್ ಮನೆಯ ಕೈದೋಟದಲ್ಲಿ ಏನೋ ಯೋಚಿಸುತ್ತಾ ನಿಂತಿದ್ದನ್ನು ಕಂಡ ಅವನ ಸೆಕ್ರೆಟರಿ ಕೇಳುತ್ತಾಳೆ: 'ಡಾನ್ ಗೇಬ್ರಿಯಲ್! ಇಲ್ಲೇನ್ ಮಾಡ್ತಿದೀರ?'

'ಅಳ್ತಾ ಇದೀನಿ.'

'ಅಳ್ತಾ ಇದೀರ? ಇಲ್ವಲ್ಲ?'

'ಅಳ್ತಿದೀನಿ. ಕಣ್ಣೀರಿಲ್ಲದೆ ಅಳ್ತಿದೀನಿ. ಈಗ ನನ್ನ ತಲೆ ಕೆಟ್ಟು ಗೊಬ್ಬರ ಆಗಿದೆ ಅನ್ನೋದು ನಿಂಗೆ ಗೊತ್ತಾಗ್ತಾ ಇಲ್ವ?'

ಮತ್ತೊಂದು ದಿನ ಮಾರ್ಕ್ವೆಜ್ ಇದ್ದಕ್ಕಿದ್ದಂತೆ, 'ಇದು ನನ್ನ ಮನೆ ಅಲ್ಲ. ಮನೆಗೋಗ್ತೀನಿ. ಅಪ್ಪನ ಹತ್ರ ಹೋಗ್ತೀನಿ. ಅಪ್ಪನ ಹಾಸಿಗೆ ಪಕ್ದಲ್ಲಿ ನನ್ ಹಾಸಿಗೆ ಇದೆ' ಎನ್ನುವನು.

ಹಾಗೆಂದು ಅವನಿಗೆ ಎಲ್ಲವೂ ಮರೆತು ಹೋಗಿತ್ತೆಂದು ಹೇಳುವುದು ಕೂಡ ಕಷ್ಟ. ಎಲ್ಲೋ ಆಳದಲ್ಲಿ ಯಾವುದೋ ಪ್ರತಿಧ್ವನಿ ಹುಟ್ಟಿ ಅವನು ಎದುರಿಗಿದ್ದವರನ್ನು, 'ಎಲ್ಲಾ ಆರಾಮ?' 'ಈಗ ಯಾವೂರಲ್ಲಿದೀರ?' 'ಮನೆ ಕಡೆ ಎಲ್ಲ ಚೆನ್ನಾಗಿದಾರ?' ಎಂದೆಲ್ಲ ಕೇಳುವನು. ಇದಕ್ಕಿಂತ ಮುಖ್ಯವಾದ ಏನನ್ನೋ ಕೇಳಲು ತಡವರಿಸುತ್ತಾ ಪದಗಳೇ ಹೊರಡದೆ ಸುಮ್ಮನಾಗುವನು. ಸಣ್ಣಗೆ ಹೊಗೆ ಮೇಲೆದ್ದು ಮರೆಯಾದಂತೆ ಮುಖದ ಮೇಲೆ ಚಣ ವಿಸ್ಮಯ, ಮುಜುಗರ ಮೂಡಿ ಮಾಯವಾಗುವುವು. ಈ ಸ್ಥಿತಿಯಲ್ಲಿ ಸಿಲುಕಿದ್ದ ಮಾರ್ಕ್ವೆಜ್‌ನನ್ನು ನೋಡಿದವರಿಗೆ ಅವನು ಉಸಿರಾಡಿದಷ್ಟೇ ಸಲೀಸಾಗಿ ಮಾತಾಡುತ್ತಿದ್ದ ಕಾಲ ನೆನಪಾಗುವುದು. ತಮಾಷೆಯ, ಬಡಿದೆಬ್ಬಿಸುವ, ಪ್ರಚೋದಿಸುವ ಮಾತುಗಾರ; ಎಷ್ಟು ದೊಡ್ಡ ಲೇಖಕನಾಗಿದ್ದನೋ ಅಷ್ಟೇ ದೊಡ್ಡ ಆಕರ್ಷಕ ಮಾತುಗಾರನೆಂದು ಕೂಡ ಖ್ಯಾತನಾಗಿದ್ದ ಮಾರ್ಕ್ವೆಜ್ ಈಗ ಪದಗಳಿಗಾಗಿ ತಡಕಾಡತೊಡಗುವನು. ಮುಂದೆ ಮಾತಾಡಬೇಕಾದ ಪದ ಅವನ ಪ್ರಜ್ಞೆಯೊಳಗೇ ಇಲ್ಲವಲ್ಲ ಎಂದು ಮನೆಯವರು ಖಿನ್ನರಾಗಿದ್ದಾಗ, ಸಂಜೆ ಹಠಾತ್ತನೆ ಮಾರ್ಕ್ವೆಜ್ ಕೇಳುವನು: 'ರಾತ್ರಿ ಎಲ್ಲಿಗೆ ಹೋಗೋಣ? ಖುಷಿಖುಷಿಯಾಗಿ ನಗನಗ್ತಾ ಇರೋ ಕಡೆಗೆ ಹೋಗೋಣಾ? ಡ್ಯಾನ್ಸ್ ಮಾಡೋಣಾ? ಆಂ? ಯಾಕೆ? ಯಾಕಾಗಲ್ಲ?'

ಮನೆಯವರು ದುಗುಡದಿಂದ ಮತ್ತೆ ಮತ್ತೆ ಮಾತು ಬದಲಿಸುವರು. ಮಾರ್ಕ್ವೆಜ್ ಮೆಲ್ಲಗೆ ಆ ಪ್ರಶ್ನೆ ಬಿಟ್ಟು ಸರಿಯುವನು.

ಮರ್ಸಿಡಿಸ್ ರೂಮಿನೊಳಕ್ಕೆ ಅಡಿಯಿಡುವಳು. ಈಗ ಮಾರ್ಕ್ವೆಜ್‌ಗೆ ಅವಳ ಗುರುತು ಹತ್ತುವುದು. 'ಮೆಶೆ! ಮರ್ಸಿಡಿಸ್! ಅಮ್ಮ! ಹೋಲಿ ಮದರ್!' ಎನ್ನುವನು.

ಒಂದೆರಡು ತಿಂಗಳ ಹಿಂದೆ ಇದೇ ಮರ್ಸಿಡಿಸ್ ಬಂದಾಗ ಅವಳನ್ನೇ ನೋಡುತ್ತಾ ಮಾರ್ಕ್ವೆಜ್ ಕೇಳಿದ್ದು ಮಗನಿಗೆ ನೆನಪಾಗುವುದು: 'ಇವಳ್ಯಾರಯ್ಯಾ ಅವಳ ಥರಾನೇ ಆಡ್ತಿದಾಳೆ? ಇವಳ್ಯಾಕೆ ಎಲ್ಲಾರ್ಗೂ ಆರ್ಡರ್ ಮಾಡ್ತಿದಾಳೆ? ಇವಳೇ ಮನೇ ನಡೆಸ್ತಿದಾಳಲ್ಲ? ನನಗೂ ಇವಳಿಗೂ ಏನೂ ಸಂಬಂಧ ಇಲ್ವಲ್ಲ?'

ಮರ್ಸಿಡಿಸ್ ರೇಗಿ ಕೇಳುವಳು, 'ಅಯ್ಯೋ, ನಿಮ್ಮಪ್ಪಂಗೇನಾಗಿದೆಯಪ್ಪ?'

'ಅಯ್ಯೋ, ಅಪ್ಪ ಅಲ್ಲಮ್ಮ ಮಾತಾಡ್ತಾ ಇರೋದು. ಅವನ ಮರೆವಿನ ಕಾಯಿಲೆ ಮಾತಾಡ್ತಿದೆ.'

ಮರ್ಸಿಡಿಸ್ ನಂಬಲಾರಳು.

ಅಚ್ಚರಿ! ಇದಾದ ಕೆಲವೇ ದಿನಗಳಲ್ಲಿ ಮಾರ್ಕ್ವೆಜ್‌ಗೆ ಮರ್ಸಿಡಿಸ್ ನೆನಪು ಹತ್ತುವುದು. ಅವಳು ತನ್ನ ಪರಮಾಪ್ತ ಸಂಗಾತಿ ಎಂಬುದು ನೆನಪಾಗುವುದು. ಸೆಕ್ರೆಟರಿ, ಅಡುಗೆಯವಳು, ಮನೆಗೆಲಸದವರು ಎಲ್ಲರನ್ನೂ ಗುರುತಿಸುವನು. ಅಯ್ಯೋ, ಏನು ಮಾಡಿದರೂ ಅವರ ಹೆಸರು ಹೊಳೆಯದು. ಅವನ ಮಕ್ಕಳು–ರೊಡ್ರಿಗೊ, ಗೊಂಝಾಲೊ–ಬಂದಾಗ ಕಡುಕುತೂಹಲದಿಂದ ಅವರನ್ನೇ ನೋಡುವನು. ಎಲ್ಲೋ ನೋಡಿದ ನೆನಪು. ಯಾರೂಂತ ಮಾತ್ರ ಗೊತ್ತಾಗುತ್ತಿಲ್ಲ.

'ಈಗ ಪಕ್ಕದ ರೂಮಿಗೆ ಹೋದ್ರಲ್ಲ, ಯಾರವರು?' ಮಾರ್ಕ್ವೆಜ್ ಮನೆಗೆಲಸದವಳನ್ನು ಕೇಳುವನು.

'ನಿಮ್ಮ ಮಕ್ಳು.'

'ನಿಜಾನ? ಅವರಾ? ಫಕ್! ನಾನಂತೂ ನಂಬಲ್ಲ'